

# ಸ್ವಾಮಿ ಯೋಗಾನಂದರ ಸಂದೇಹ

೧೮೯೭ರ ಮೇ ೧ರಂದು ಸ್ವಾಮಿ ವಿವೇಕಾನಂದರು ಕೊಲ್ಕತ್ತದ ಬಲರಾಮನ ಮನೆಯಲ್ಲಿ ರಾಮಕೃಷ್ಣ ಮಿಷನ್ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅವರು ರಾಮಕೃಷ್ಣ ಮಹಾ ಸಂಘಕ್ಕೆ ಬ್ರಹ್ಮಾನಂದರನ್ನು ಅಧ್ಯಕ್ಷರನ್ನಾಗಿಯೂ, ಯೋಗಾನಂದರನ್ನು ಉಪಾಧ್ಯಕ್ಷರನ್ನಾಗಿಯೂ ಮಾಡಿದರು. ಸಭೆಯ ಮುಕ್ತಾಯದ ನಂತರ ಸ್ವಾಮಿ ವಿವೇಕಾನಂದರು ಯೋಗಾನಂದರಿಗೆ, ''ನಮ್ಮ ಕಾರ್ಯ ಹೀಗೆ ಪ್ರಾರಂಭವಾಗಿದೆ. ಶ್ರೀರಾಮಕೃಷ್ಣರ ಇಚ್ಛೆಯಿಂದ ಅದು ಹೇಗೆ ಯಶಸ್ವಿಯಾಗುವುದೋ ನೋಡೋಣ'' ಎಂದು ಹೇಳಿದರು.

ಯೋಗಾನಂದರು: ''ನೀನು ಇದನ್ನೆಲ್ಲಾ ಪಾಶ್ಚಿಮಾತ್ಯ ವಿಧಾನದಂತೆ ಮಾಡುತ್ತಿರುವೆ. ಶ್ರೀರಾಮಕೃಷ್ಣರು ನಮಗೆ ಹೀಗೆ ಮಾಡಿರೆಂದು ಹೇಳಿದ್ದರೆನ್ನುವೆಯಾ?''

ಸ್ವಾಮಿಜಿ: ''ಈ ವಿಧಾನಗಳೆಲ್ಲ ಅವರ ಅಭಿಪ್ರಾಯಗಳಿಗೆ ಹೊಂದುವುದಿಲ್ಲವೆಂದು ನಿನಗೆ ಹೇಗೆ ಗೊತ್ತು? ಶ್ರೀರಾಮಕೃಷ್ಣರೆಂದರೆ ಅನಂತ ಕಲ್ಪನೆಗಳ ಆವಿರ್ಭಾವ. ನೀನು ಅವರನ್ನು ನಿನ್ನ ಮಿತಿಯೊಳಗೆ ಇರಿಸಿಕೊಳ್ಳಬಯಸುವೆಯಾ? ನಾನು ಆ ಮಿತಿಗಳನ್ನೆಲ್ಲ ಮೀರಿ ಪ್ರಪಂಚದಾದ್ಯಂತ ಅವರ ಕಲ್ಪನೆಗಳನ್ನು ಹರಡಲು ಬಯಸುತ್ತೇನೆ. ತನ್ನ ಪೂಜೆಯನ್ನು ಪ್ರಾರಂಭ ಮಾಡಬೇಕು ಇತ್ಯಾದಿಯಾಗಿ ಅವರೇನೂ ನನಗೆ ಹೇಳಿರಲಿಲ್ಲ. ಅವರು ನಮಗೆ ಕಲಿಸಿರುವ ಏಕಾಗ್ರತೆ, ಧ್ಯಾನ ಮೊದಲಾದ ಅಧ್ಯಾತ್ಮಸಾಧನೆಯ ವಿಧಾನಗಳು, ಮತ್ತಿತರ ಉನ್ನತ ಧಾರ್ಮಿಕ ಆದರ್ಶಗಳನ್ನು ನಾವು ಸಾಕ್ಷಾತ್ಕರಿಸಿಕೊಂಡು, ಮಾನವರೆಲ್ಲರಿಗೂ ಕಲಿಸಿಕೊಡಬೇಕು. ಗುರಿ ಸೇರುವುದಕ್ಕೆ ಇರುವ ಪಥಗಳು, ಕಲ್ಪನೆಗಳು ಅನಂತವಾಗಿರುವುವು. ಈಗಾಗಲೆ ಅನೇಕಾನೇಕ ಪಂಥಗಳಿಂದ ತುಂಬಿಹೋಗಿರುವ ಈ ಲೋಕದಲ್ಲಿ ಇನ್ನೊಂದು ಪಂಥವನ್ನು ಸ್ಥಾಪಿಸಲು ನಾನು ಹುಟ್ಟಿಬರಲಿಲ್ಲ. ಶ್ರೀರಾಮಕೃಷ್ಣರ ಪದತಲದಲ್ಲಿ ಆಶ್ರಯ ಪಡೆದಿರುವ ನಾವೇ ಧನ್ಯರು. ಅವರು ನಮಗಿತ್ತಿರುವ ಕಲ್ಪನೆಗಳನ್ನು ಮುಕ್ತವಾಗಿ ಪ್ರಪಂಚಕ್ಕೆ ಕೊಡುವುದು ನಮ್ಮ ಕರ್ತವ್ಯ''.

ಯೋಗಾನಂದರು ಸುಮ್ಮನಿದ್ದುದರಿಂದ ಸ್ವಾಮೀಜಿ ಮುಂದುವರೆಸಿದರು: ''ಆಗಿಂದಾಗ್ಯೆ ನಾನು ಅವರ ಕೃಪೆಯ ಕುರುಹುಗಳನ್ನು ಪಡೆಯುತ್ತಲೇ ಬಂದಿರುವೆ. ನನ್ನ ಹಿಂದೆ ಅವರೇ ನಿಂತು ನನ್ನಿಂದ ಇದನ್ನೆಲ್ಲವನ್ನೂ ಮಾಡಿಸುತ್ತಿದ್ದಾರೆ''.

ಯೋಗಾನಂದರು: ''ನೀನು ಇಚ್ಛಿಸುವುದೆಲ್ಲವೂ ಆಗಿಯೇ ಆಗುತ್ತದೆ. ನಾವು ನಿನ್ನನ್ನು ಅನುಸರಿಸಲು ಸಿದ್ಧರಾಗಿದ್ದೇವೆ. ಶ್ರೀರಾಮಕೃಷ್ಣರು ನಿನ್ನ ಮೂಲಕ ಕೆಲಸಮಾಡುತ್ತಿರುವರೆಂಬುದು ನನಗೂ ಸ್ಪಷ್ಟವಾಗಿ ಕಾಣಿಸುತ್ತಿದೆ. ಆದರೂ, ನನ್ನ ಮನಸ್ಸಿನಲ್ಲಿ ಕೆಲವೊಮ್ಮೆ ಸಂಶಯವೇಳುತ್ತದೆ; ಏಕೆಂದರೆ, ನಾವೇ ನೋಡಿರುವಂತೆ, ಅವರು ಎಲ್ಲವನ್ನೂ ಮಾಡುವ ಕ್ರಮ ಬೇರೆಯೇ ಆಗಿತ್ತು. ಶ್ರೀರಾಮಕೃಷ್ಣರ ಬೋಧನೆಗಳಿಂದ ನಾವು ದೂರವಾಗುತ್ತಿಲ್ಲವೇ ಎಂದು ನನ್ನನ್ನು ನಾನೇ ಕೇಳಿಕೊಳ್ಳುವಂತಾಗುತ್ತದೆ''.

ಸ್ವಾಮೀಜಿ: ''ವಿಷಯ ಇಷ್ಟೆ: ಶಿಷ್ಯರು ಅವರೇನೆಂದು ಎಷ್ಟು ಅರ್ಥಮಾಡಿಕೊಂಡಿರುವರೋ ಅದಕ್ಕಿಂತ ತುಂಬ ತುಂಬ ಮಿಗಿಲಾದವರು ಶ್ರೀರಾಮಕೃಷ್ಣರು. ಅಪರಿಮಿತ ರೀತಿಗಳಲ್ಲಿ ಬೆಳೆಯಬಲ್ಲ ಅನಂತ ಆಧ್ಯಾತ್ಮಿಕ ಕಲ್ಪನೆಗಳ ಆವಿರ್ಭಾವ ಅವರು. ಒಂದು ವೇಳೆ ಬ್ರಹ್ಮಜ್ಞಾನಕ್ಕೇ ಮಿತಿಯನ್ನು ಹಾಕಬಹುದಾದರೂ, ನಮ್ಮ ಗುರುವಿನ ಮನಸ್ಸಿನಾಳದ ಆಳತೆ ಮಾತ್ರ ಸಿಕ್ಕದು! ಅವರ ಕೃಪೆಯ ಒಂದು ದೃಷ್ಟಿ ಇದೇ ಕ್ಷಣ ಬೇಕಾದರೆ ನೂರು ಸಾವಿರ ವಿವೇಕಾನಂದರನ್ನು ಸೃಷ್ಟಿಸಬಲ್ಲುದು! ಬದಲಿಗೆ, ಈ ಸಲಕ್ಕೆ ಅವರು ನನ್ನನ್ನು ತಮ್ಮ ಉಪಕರಣವನ್ನಾಗಿಸಿಕೊಂಡು ನನ್ನ ಮೂಲಕ ಕೆಲಸಮಾಡಲು ಇಚ್ಛಿಸುವುದಾದರೆ, ನಾನು ಕೇವಲ ಅವರಿಚ್ಛೆಗೆ ತಲೆಬಾಗುವೆ''.

ಯೋಗಾನಂದರ ಮನ ಕಲಕಿತು. ಅವರು ಸ್ವಾಮೀಜಿಯನ್ನು ಪ್ರಶಂಸಿಸತೊಡಗಿದರು.

*(ದೇವರೊಡನೆ ಬಾಳಿದವರು, ಭಾಗ ೧, ಪು. ೨೭೭-೭೮)*